ಅಪ್ರಜ್ಞಾಪೂರ್ವಕವಾಗಿ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡತಲ್ಲವೆ? ಕೊನೆಗೂ ಅವನ ಗುರುತು ಹೀಗೆಯೇ ಉಳಿಯುತ್ತದೆ ಅಲ್ಲವೆ? ಈ ಪ್ರಶ್ನೆಗಳು ಇಂದಿನ ಓದುಗರ ನ್ಯಾಯಬದ್ಧವಾದ ಪ್ರಶ್ನೆಗಳೇ. ನನ್ನ ದೃಷ್ಟಿಯಲ್ಲಿ ಒಂದು, ಈ ನಾಮಕರಣವನ್ನು ಒಪ್ಪಿಗೆಯಲ್ಲ ಪ್ರತಿಭಟನೆಗಾಗಿಯೂ ಬಳಸಬಹುದು. ಉದಾಹರಣೆಗೆ ಸಿದ್ಧಲಿಂಗಯ್ಯನವರು ತಮ್ಮ ಕವನ ಸಂಕಲನಕ್ಕೆ 'ಹೊಲೆಮಾದಿಗರ ಹಾಡು' ಎಂದು 1975ರಲ್ಲಿ ಹೆಸರು ನೀಡಿದ್ದು.

**'...ಯಾವುದೀ ನ್ಯಾಯ?**
**ಹಾರುವ! ಮಾಡಿದ್ದುಣ್ಣುವೆ ಮಹಾರಾಯ!'**

ಈ ಸಾಲಿಗೆ ವ್ಯಾಖ್ಯಾನ ಬೇಕಿಲ್ಲ. ಇದರ ಹಿಂದಿನ ಸಾಲುಗಳಲ್ಲಿ ಜಾತಿ ವ್ಯವಸ್ಥೆಯು ಬಾವಿ, ಕೆರೆ, ಊರಸಾಲೆ ಇವೆಲ್ಲವುಗಳು ಅವನಿಗೆ ಲಭ್ಯವಿಲ್ಲವೆನ್ನುವ ವಿವರಣೆ ಇದೆ.

ಈ ಪದ್ಯದಲ್ಲಿರುವ ಎರಡು ಎಳೆಗಳ ಬಗ್ಗೆ ಇಂದಿನ ಓದುಗರಿಗೆ ತಕರಾರು ಇರುವುದು ಸಾಧ್ಯ. ಪ್ರತಿಭಟಿಸುವ ಹೊಲೆಯನು

**'ಅಳುವ ತಮ್ಮಗೆ ಸರಿ ಮಣೆಯನು ಇಕ್ಕು**
**ಕಲಿಯುಗದಲ್ಲಿ ನಿನಗಿದು ಪುಣ್ಯವಕ್ಕು'**

ಇಂಥ ಸಾಲುಗಳಲ್ಲಿ ಉಳ್ಳಯ್ಯನಿಗೆ ಅವನು appeal ಮಾಡಿಕೊಳ್ಳುವ ರೀತಿ ಪ್ರತಿಭಟನೆಗೆ ಒಗ್ಗುವುದೇ? 'ಹಗೆ'ಯ ಕ್ರಿಯಾಶೀಲತೆಗೆ ಇದು ವಿರುದ್ಧವಲ್ಲವೆ? ಹಾಗೆಯೆ 'ನೀಡಣ್ಣ, ದಮ್ಮಯ್ಯ' ಎನ್ನುವ ಪದಗಳು ಕೂಡ ಇರುಸುಮುರುಸು ಮಾಡುತ್ತವಲ್ಲವೆ? ಅಲ್ಲದೆ ಪದ್ಯದ ಕೊನೆಯ ಸಾಲುಗಳು ಕೂಡ 'ಮುಟ್ಟು, ಕೈಗೆ ಕೈ ಬಂಧಿಸು, ಸಲುಗೆಯ ಹೊಂದಿಸು' ಇಂಥ ಬೇಡಿಕೆಯ ಧಾಟಿಯಲ್ಲಿವೆ. ಹಾಗಿದ್ದರೆ ಪದ್ಯವು ಹಕ್ಕೊತ್ತಾಯ ಮತ್ತು ಬೇಡಿಕೆಗಳ ನಡುವೆ ವಿರೋಧಾಭಾಸವನ್ನು ಹೊಂದಿದೆಯೇ? ಇದು ಉಳ್ಳಯ್ಯನ ನೈತಿಕತೆ, ಪುಣ್ಯ, ಒಳಗಿರಬಹುದಾದ ಒಳ್ಳೆಯತನಗಳಿಗೆ ಒಂದು appeal ಆಗಿಬಿಡುತ್ತದೆಯೇ?

ಪದ್ಯದ ಇನ್ನೊಂದು ಬಹುಮುಖ್ಯ ಅಂಶವೆಂದರೆ ಅದರಲ್ಲಿ ಆ ಕಾಲದ ರಾಷ್ಟ್ರೀಯತೆ ಹಾಗೂ ಪರದೇಶಿ ಆಳ್ವಿಕೆ (ವಸಾಹತುಶಾಹಿ) ಪ್ರವೇಶ ಮಾಡುವ ಬಗೆಯಾಗಿದೆ. ಹೊಲೆಯ ಕೇಳುವ ಅರ್ಥಪೂರ್ಣ ಪ್ರಶ್ನೆಯೆಂದರೆ ಪರದೇಶಿ ಕಾಯಿದೆಯೂ ಒಂದು ಸಾಸಿವೆ ಕಾಳಿನಷ್ಟು ಹೆಚ್ಚಾದರೆ 'ಬೊಬ್ಬೆ'ಗೈಯುವ ಸ್ವಾತಂತ್ರ್ಯ ಹೋರಾಟಗಾರರು, ತಮ್ಮ ಕಾಲಡಿಯಲ್ಲಿಯೇ ಇರುವ ಕುಂಬಳಕ್ಕೆ ಕುರುಡರಾದರೆ... ಅಂದರೆ ತಮ್ಮ ಸಮಾಜದೊಳಗೆ ಬೇರು ಬಿಟ್ಟಿರುವ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯನ್ನು ವಿರೋಧಿಸದೇ ವಸಾಹತುಶಾಹಿಯನ್ನು ವಿರೋಧಿಸುವುದಕ್ಕೆ ಅರ್ಥವಿದೆಯೇ? ಈ ಪ್ರಶ್ನೆಯಲ್ಲಿರುವ ಸೆಡವು ಪದ್ಯದ ಕೊನೆಗೆ ಮೆತ್ತಗಾಗವುದು ಅಂದಿನ ರಾಷ್ಟ್ರೀಯತೆಯ ಇನ್ನೊಂದು ಎಳೆಯಿಂದಾಗಿ. ತಾರತಮ್ಯ, ಅಸ್ಪೃಶ್ಯತೆ ಇವುಗಳನ್ನು ತೊರೆದು 'ಸಲುಗೆ'ಯನ್ನು ಸಾಧಿಸಿದ್ದರೆ 'ಹಿಂದು ದೇವಿಯು ಘಲ್ಲೆಂಬಳು, ಕಾಲಂದುಗೆಯಾ' ಎಂದು ಪದ್ಯವು ಕೊನೆಗೊಳ್ಳುತ್ತದೆ. ಇಲ್ಲಿರುವ ಪರಿಭಾಷೆಯೂ ಪದ್ಯವು ರಚನೆಯಾದ ಕಾಲದ ರಾಷ್ಟ್ರೀಯತೆಯು ಧಾರ್ಮಿಕ ಸುಧಾರಣೆ, ಸಾಮಾಜಿಕ ಸುಧಾರಣೆ, ಮಾನವತ್ವ ತಾತ್ವಿಕತೆ (humanism) ಇವೆಲ್ಲವುಗಳ ಸಂದರ್ಭದಲ್ಲಿ ಹುಟ್ಟಿದ ಪರಿಭಾಷೆಯಾಗಿದೆ.

ಈ ಪರಿಭಾಷೆಯ ದೌರ್ಬಲ್ಯಗಳು ಇಂದಿನ ಓದುಗರಾದ ನಮಗೆ ಸುಪರಿಚಿತವಾಗಿವೆ. ಈ ಪದ್ಯ ಓದುವಾಗ ನನ್ನ ಮನಸ್ಸನ್ನು ಆವರಿಸಿಕೊಂಡಿದ್ದು ಗಾಂಧಿ ತಮ್ಮ ಗುರುವೆಂದು ಕರೆದಿದ್ದ ಕುದ್ಮುಲ್ ರಂಗರಾಯರ ನೆನಪುಗಳು. ಪಂಜೆಯವರ ಪದ್ಯ ಈ ಸಂಪ್ರದಾಯಕ್ಕೆ ಸೇರಿದ್ದು. ಅವರ ಹಾಗೆ ಪಂಜೆಯವರು (ಶಾಲಾ ಇನ್‌ಸ್ಪೆಕ್ಟರ್ ಮತ್ತು ಹೆಡ್ ಮಾಸ್ಟರ್ ಆಗಿದ್ದವರು) ದಲಿತ ಮಕ್ಕಳಿಗೆ ಶಾಲೆಗಳಿಗೆ ಪ್ರವೇಶ ಕೊಡಿಸಲು ಪ್ರಯತ್ನ ಮಾಡಿದ್ದವರು. ಅಲ್ಲದೆ ಒಂದು ಮಾಹಿತಿಯ ಪ್ರಕಾರ ಈ ಪದ್ಯವನ್ನು ಮಕ್ಕಳಿಂದ ಹಾಡಿಸಿದ್ದರು. ಈ ಮಾಹಿತಿ ಅಧಿಕೃತವೋ ಗೊತ್ತಿಲ್ಲ. ಆದರೆ ನಾನಂತೂ ಅದನ್ನು ನಂಬುತ್ತೇನೆ. ಮತ್ತು ಆ ಕಾಲದ ಅಪರೂಪದ ಈ ಪದ್ಯ ಬರೆದದ್ದಕ್ಕಾಗಿ ಅವರನ್ನು ಗೌರವಿಸುತ್ತೇನೆ.

●

